ಆರ್ ಎನಂ. **20/2019**
ಪಿ ಡಬ್ಲೂ-**1** ( ರಮಾಕಾಂತ )

<u>ಇಂದು ದಿನಾಂಕಃ **21-11-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಪಿ.ಡಿ ವಕೀಲರಿಂದ ( ಎದುರುದಾರರ ಪರ )</u>

ಅಸಲು ದಾವೆ ನಂ.132/2016 ದಿನಾಂಕಃ 04-12-2018 ರಂದು ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹಾಜರಾಗಿದ್ದೇನೆ ಎಂದರೆ ಸರಿ. ಸದರಿ ದಾವೆ ಇತ್ಯರ್ಥದ ಹಂತದಲ್ಲಿದ್ದಾಗ ಒಂದು ದಾನಪತ್ರವನ್ನು ಮಾಡಿದ್ದೇವೆ ಎಂದರೆ ಸರಿ . ಸದರಿ ದಾನಪತ್ರದ ಬಗ್ಗೆ ತಹಶೀಲ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಿದಾಗ ಅದರಲ್ಲಿ ಹಾಜರಾಗಿದ್ದೇವೆ ಎಂದರೆ ಸರಿ. ಸದರಿ ದಾನಪತ್ರದ ಬಗ್ಗೆ ಎ.ಸಿ.ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಅದು ಇತ್ಯರ್ಥದ ಹಂತದಲ್ಲಿದೆ ಎಂದರೆ ಸರಿ. ದಾವೆಯ ತೀರ್ಮಾನದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ದಾಖಲಿಸಿದಕ್ಕೆ ಯಾವುದೇ ಸಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಗೆ ಸಂಬಂಧಪಟ್ಟಂತೆ ಎಫ್.ಡಿ.ಪಿ ನಂ.3/2019 ದಾಖಲಿಸಿದ್ದು ಅದರಲ್ಲಿ ನಾನು ಹಾಜರಾಗಿಲ್ಲ ಎಂದರೆ ಸರಿ. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ನಾನು ಉದ್ದೇಶಪೂರ್ವಕವಾಗಿ ಭಾಗವನ್ನು ನೀಡಬಾರದು ಎಂಬ ಉದ್ದೇಶದಿಂದ ಈ ಮೇಲ್ಮನವಿಯನ್ನು 246 ದಿವಸಗಳ ವಿಳಂಬವಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಿಳಂಬಕ್ಕೆ ಸಂಬಂಧಪಟ್ಟಂತೆ ನಾನು ಸಮಂಜಸ ಕಾರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ವಿಳಂಬವನ್ನು ಮನ್ನಿಸಲು ಸುಳ್ಳು ಅರ್ಜಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ, ಸೇಡಂ.